# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 12 (67) |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 12.09.2022. |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರಿ ಹಾಗೂ ಅನುದಾನಿತ ಇಂಜಿನಿಯರಿಂಗ್ ಕಾಲೇಜಿನ ಬೋಧಕ ವರ್ಗದವರಿಗೆ 7ನೇ ವೇತನ ಶ್ರೇಣಿಯ ವೇತನ ಬಾಕಿಯನ್ನು ಇದುವರೆವಿಗೂ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| (ಆ) | ಹಾಗಾದರೆ ಪಾವತಿಸಬೇಕಾಗಿರುವ ಬಾಕಿ ವೇತನ ಎಷ್ಟು; (ಸರ್ಕಾರಿ/ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಪ್ರತ್ಯೇಕವಾಗಿ ವಿವರಗಳನ್ನು ನೀಡುವುದು); | ಪಾವತಿಸಬೇಕಾಗಿರುವ ಬಾಕಿ ವೇತನ ವಿವರಗಳು ಕೆಳಕಂಡಂತಿದೆ:-<br><br>ಕ್ರ. ಸಂ. / ವಿಭಾಗ / ಅರ್ಹವಿರುವ ಸಿಬ್ಬಂದಿ ಸಂಖ್ಯೆ / ಅಗತ್ಯವಿರುವ ಮೊತ್ತ (ರೂ.ಲಕ್ಷಗಳಲ್ಲಿ)<br>1. / 14 ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / 355 / 1350.00<br>2. / 10 ಅನುದಾನಿತ ಇಂಜಿನಿಯರಿಂಗ್ ಕಾಲೇಜು / 693 / 3000.00 |
| (ಇ) | ವೇತನ ಬಾಕಿಯನ್ನು ನೀಡುವ ಸಂಬಂಧ ಇದುವರೆವಿಗೂ ಹೊರಡಿಸಲಾದ ಸರ್ಕಾರದ ಆದೇಶಗಳು ಯಾವುವು; (ಪ್ರತಿಗಳನ್ನು ಒದಗಿಸುವುದು); | ವೇತನ ಬಾಕಿಯನ್ನು ನೀಡುವ ಸಂಬಂಧ ಇದುವರೆವಿಗೂ ಹೊರಡಿಸಲಾದ ಸರ್ಕಾರದ ಆದೇಶಗಳು ಈ ಕೆಳಕಂಡಂತಿವೆ:-<br>1) ಸರ್ಕಾರದ ಪತ್ರ ಸಂಖ್ಯೆ:ಇಡಿ/306/ಯುಎನ್ಇ/2021, ದಿನಾಂಕ:25.02.2022.<br>2) ಸರ್ಕಾರದ ಪತ್ರ ಸಂಖ್ಯೆ:ಇಡಿ/306/ಯುಎನ್ಇ/2021, ದಿನಾಂಕ: 05.03.2022.<br>3) ಸರ್ಕಾರದ ಪತ್ರ ಸಂಖ್ಯೆ: ಇಡಿ/306/ಯುಎನ್ಇ/2021, ದಿನಾಂಕ:09.03.2022.<br>4) ಸರ್ಕಾರದ ಪತ್ರ ಸಂಖ್ಯೆ: ಇಡಿ/58/ಹೆಚ್‌ಪಿಸಿ/2022, ದಿನಾಂಕ: 27.04.2022.<br>5) ಸರ್ಕಾರದ ಪತ್ರ ಸಂಖ್ಯೆ:ಇಡಿ/19/ಹೆಚ್‌ಪಿಟಿ/2022, ದಿನಾಂಕ:07.05.2022. |

| | | |
|---|---|---|
| (ಈ) | ಯಾವ ಕಾಲಮಿತಿಯಲ್ಲಿ ವೇತನ ಬಾಕಿಯನ್ನು ನೀಡಲಾಗುವುದು | ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜು/ಬಿ.ಎಡ್ ಕಾಲೇಜು/ಇಂಜಿನಿಯರಿಂಗ್ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಬೋಧಕ ಹಾಗೂ ತತ್ಸಮಾನ ಸಿಬ್ಬಂದಿಗಳಿಗೆ 2006 ಮತ್ತು 2016ರ ಪರಿಷ್ಕೃತ ಯುಜಿಸಿ/ಎಐಸಿಟಿಇ ವೇತನ ಶ್ರೇಣಿಯ ವ್ಯತ್ಯಾಸದ ಬಾಕಿ ಮೊತ್ತವನ್ನು ಪಾವತಿಸಲು 2021-22ನೇ ಸಾಲಿನ ಆಯವ್ಯಯದ ಪೂರಕ ಅಂದಾಜು-3ರಲ್ಲಿ ರೂ.45469.22ಲಕ್ಷಗಳನ್ನು ಒದಗಿಸಿ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪಿ.ಡಿ.ಖಾತೆಯಲ್ಲಿರಿಸಲು ಅನುಮತಿ ನೀಡಲಾಗಿದೆ.<br><br>ಈ ಸಂಬಂಧ ಸರ್ಕಾರಿ ಹಾಗೂ ಅನುದಾನಿತ ಇಂಜಿನಿಯರಿಂಗ್ ಕಾಲೇಜು/ಸಂಸ್ಥೆಗಳಿಂದ ಸಲ್ಲಿಸಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಕ್ರಮವಹಿಸಲಾಗುವುದು. |

ಸಂಖ್ಯೆ: ಇಡಿ 105 ಹೆಚ್‌ಪಿಟಿ 2022)

(ಡಾ: ಅಶ್ವತ್ಥನಾರಾಯಣ ಸಿ.ಎನ್)
ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು
ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು
ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು.

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 306 ಯುಎನ್‌ಇ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 25.02.2022

**ಇವರಿಂದ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು-560 001.

**ಇವರಿಗೆ,**
1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳು.

**ಮಾನ್ಯರೇ,**

**ವಿಷಯ:** 7 ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಬಾಕಿಯನ್ನು ಪಾವತಿ ಮಾಡುವ ಮತ್ತು 6 ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ವಸೂಲು ಮಾಡುವ ಕುರಿತು.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಇಡಿ 483 ಯುಎನ್‌ಇ 2017 ದಿನಾಂಕ: 03.05.2019.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 311 ಯುಎನ್‌ಇ 2012 (ಭಾಗ 2), ದಿನಾಂಕ: 17.12.2019, 03.01.2020 ಮತ್ತು 24.06.2020.
3. ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 483 ಯುಎನ್‌ಇ 2017, ದಿನಾಂಕ: 11.08.2020
4. ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 19 ಯುಎನ್‌ಇ 2021, ದಿನಾಂಕ: 21.10.2021.
5. ಕರ್ನಾಟಕ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ (ರಿ) ರವರ ಮನವಿ ದಿನಾಂಕ: 19.08.2020
6. ಸರ್ಕಾರದ ಸಮಸಂಖ್ಯೆಯ ಪತ್ರ ದಿನಾಂಕ:24.02.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟ, ಇವರು ದಿನಾಂಕ: 18.08.2020 ರಂದು ಸರ್ಕಾರಕ್ಕೆ ಸಲ್ಲಿಸಿದ ಮನವಿಯಲ್ಲಿ ಯುಜಿಸಿಯ 2006 ಮತ್ತು 2007 ನೇ ವೇತನ ಆಯೋಗದನ್ವಯ ನೀಡಿರುವ ಹಿಂಬಾಕಿಯನ್ನು ಸೇರ್ಪಡೆಯಾಗಿರುವ ತುಟ್ಟಿಭತ್ಯೆಯನ್ನು ಹಿಂಪಡೆದು ಅಧ್ಯಾಪಕರುಗಳಿಂದ ವಸೂಲಾತಿ ಮಾಡುವ ಆದೇಶವನ್ನು ರದ್ದುಪಡಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದನ್ನು ಪರಿಶೀಲಿಸಲಾಯಿತು.

ಇವರ ಮನವಿಯ ಮೇರೆಗೆ ಅಪರ ಮುಖ್ಯ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರು, ಆರ್ಥಿಕ ಇಲಾಖೆಯ ಅಧಿಕಾರಿಗಳು, ಹಾಗೂ ಒಕ್ಕೂಟದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ ಕೂಲಂಕಷವಾಗಿ ಚರ್ಚಿಸಿ ಈ ಸಂಬಂಧ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಪಡೆಯಲು ಸಭೆಯು ತೀರ್ಮಾನಿಸಿದ ಹಿನ್ನೆಲೆಯಲ್ಲಿ, ಈ ಪ್ರಸ್ತಾವನೆಯನ್ನು ಪುನರ್‌ಪರಿಶೀಲಿಸಲು ತೀರ್ಮಾನಿಸಲಾಯಿತು.

..2

ಈ ಕುರಿತಾಗಿ ಆರ್ಥಿಕ ಇಲಾಖೆಯು ಅಭಿಪ್ರಾಯವನ್ನು ಟಿಪ್ಪಣಿ(ಬಿ)ರ ಪತ್ರದ ಮೂಲಕ ಈಗಾಗಲೇ ತಿಳಿಸಲಾಗಿದ್ದು, ಸದರಿ ಪತ್ರದಲ್ಲಿ ಕೆಲವು ವ್ಯಾಕರಣ ದೋಷಗಳಿದ್ದು, ಅವುಗಳನ್ನು ಸರಿಪಡಿಸಿ ಈ ಕೆಳಕಂಡಂತೆ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಮತ್ತೊಮ್ಮೆ ತಿಳಿಸಲಾಗಿದೆ.

"ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂ: ಆಇ 15 ಎಸ್‌ಆರ್‌ಪಿ 2018, ದಿನಾಂಕ:16.04.2019 ಮತ್ತು ಶಿಕ್ಷಣ ಇಲಾಖೆಯ ಕಡತ ಸಂ: ED 311 UNE 2012(P-2) ರ ಕಡತ ಪುನಃ ಗಮನ ಸೆಳೆಯಬಯಸುತ್ತದೆ. ಸದರಿ ಅಭಿಪ್ರಾಯಗಳಲ್ಲಿ ಈಗಾಗಲೇ ವಿಶದಪಡಿಸಿರುವಂತೆ, 2006ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಗಳಲ್ಲಿ ದಿನಾಂಕ:01.01.2016 ರಂದು ಲಭ್ಯವಿದ್ದ ಶೇ.125ರಷ್ಟು ತುಟ್ಟಿಭತ್ಯೆಯನ್ನು ಮೂಲ ವೇತನದೊಂದಿಗೆ ವಿಲೀನಗೊಳಿಸಿ 2016ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಗಳನ್ನು ರಚಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ಅಧೀನದಲ್ಲಿ ಬರುವ ಉನ್ನತ ಶಿಕ್ಷಣ ಸಂಸ್ಥೆಗಳಿಗೆ 2016ರ ಪರಿಷ್ಕೃತ ಯು.ಜಿ.ಸಿ ವೇತನ ಶ್ರೇಣಿಯನ್ನು ಕೇಂದ್ರ ಸರ್ಕಾರವು ದಿನಾಂಕ:01.01.2016ರಿಂದಲೇ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಿದ್ದು, ಪರಿಷ್ಕೃತ ವೇತನ ಶ್ರೇಣಿಯ ಅನುಷ್ಠಾನದ ಅವಧಿಯಲ್ಲಿ ಅಂದರೆ 2016ರ ನಂತರ 2006ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ತುಟ್ಟಿಭತ್ಯೆಯನ್ನು ಮಂಜೂರು ಮಾಡಿ ಪಾವತಿಸಿಲ್ಲದಿರುವುದು ಗಮನಾರ್ಹ ಅಂಶವಾಗಿರುತ್ತದೆ. ಆದರೆ, ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯದಲ್ಲಿನ ಉನ್ನತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ 2016ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯು ವಿಳಂಬವಾಗುವ ಸಾಧ್ಯತೆಯ ಕಾರಣಗಳನ್ನು ಗಮನದಲ್ಲಿರಿಸಿ, ಬೋಧಕ ವರ್ಗದ ಸಿಬ್ಬಂದಿಗಳಿಗೆ ಉಂಟಾಗುವ ಅನಾನುಕೂಲವನ್ನು ತಪ್ಪಿಸುವ ಉದ್ದೇಶದಿಂದ, 2016ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸುವವರೆವಿಗೂ, ಕಾಲಕಾಲಕ್ಕೆ 2006ರ ಬೋಧಕ ಸಿಬ್ಬಂದಿಗಳಿಗೆ 2006ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಗಳಲ್ಲಿ ತುಟ್ಟಿ ಭತ್ಯೆಯನ್ನು ಮಂಜೂರು ಮಾಡಿರುತ್ತದೆ. 2016ರ ಯು.ಜಿ.ಸಿ. ವೇತನ ಶ್ರೇಣಿಗಳ ಪರಿಷ್ಕರಣೆಯ ಆದೇಶ ಸಂ: ED 483 UNE 2017, dated:16.03.2019ರ ಪ್ರಸ್ತಾವನೆಯಲ್ಲಿ ಈ ಬಗ್ಗೆ ವಿಸ್ತೃತವಾಗಿ ಪ್ರಸ್ತಾಪಿಸಿರುವುದನ್ನೂ ಸಹ ಇಲಾಖೆಯ ಗಮನಕ್ಕೆ ತರಬಯಸುತ್ತದೆ.

ಈ ಕಾರಣದಿಂದ, ಅಂದರೆ, ರಾಜ್ಯದಲ್ಲಿನ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ 2016ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಗಳನ್ನು ದಿನಾಂಕ:01.01.2016ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ 03 ವರ್ಷಗಳ ನಂತರ ದಿನಾಂಕ:16.03.2019ರಂದು ಆದೇಶ ಹೊರಡಿಸಲಾಗಿದ್ದರೂ, ಈಗಾಗಲೇ ಬೋಧಕ ವರ್ಗದ ಸಿಬ್ಬಂದಿಗಳಿಗೆ ಪೂರ್ವ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ತುಟ್ಟಿ ಭತ್ಯೆಯ ಮತ್ತು ಮನೆ ಬಾಡಿಗೆ ಭತ್ಯೆಯನ್ನು ಬಿಡುಗಡೆ ಮಾಡಿ ಮಂಜೂರು ಮಾಡಿದ್ದ ಕಾರಣ, 2016ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ತುಟ್ಟಿ ಭತ್ಯೆ ಮನೆ ಬಾಡಿಗೆ ಭತ್ಯೆಯ ಆರ್ಥಿಕ ಲಾಭವು ಭವಿಷ್ಯಾವರ್ತಿಯಾಗಿ ಲಭ್ಯವಾಗತಕ್ಕದ್ದೆಂದು ಆದೇಶದ ಕಂಡಿಕೆ (5) ಮತ್ತು (6)ರಲ್ಲಿ ಸ್ಪಷ್ಟವಾಗಿ ಆದೇಶಿಸಲಾಗಿರುತ್ತದೆ. ನಂತರದ ತುಟ್ಟಿ ಭತ್ಯೆಯ ಕಂತುಗಳನ್ನು ಮಂಜೂರು ಮಾಡಲು ಅನುಸರಿಸಬೇಕಾದ ಕ್ರಮವನ್ನೂ ಸಹ ಅದರಲ್ಲಿ ವಿಶದಪಡಿಸಲಾಗಿರುತ್ತದೆ. ಇದು ಸರ್ಕಾರದ ನೀತಿ ನಿರ್ಣಯವಾಗಿರುತ್ತದೆ. ಇದೇ ಕ್ರಮವನ್ನೂ ಸಹ 2006ರ ಯು.ಜಿ.ಸಿ. ವೇತನ ಶ್ರೇಣಿಗಳ ಪರಿಷ್ಕರಣೆಯ ಪ್ರಕ್ರಿಯೆಯಲ್ಲಿಯೂ ಅನುಸರಿಸಿ ಆದೇಶ ಹೊರಡಿಸಲಾಗಿರುತ್ತದೆ. ಆದರೆ 2006ರ ಯು.ಜಿ.ಸಿ. ವೇತನ ಶ್ರೇಣಿ ಪರಿಷ್ಕರಣೆಯ ದಿನಾಂಕ:24.12.2009ರ ಆದೇಶವನ್ನು ತಪ್ಪಾಗಿ ಅರ್ಥೈಸಿ ಬೋಧಕ ಸಿಬ್ಬಂದಿಗಳಿಗೆ ಹೆಚ್ಚುವರಿಯಾಗಿ ತುಟ್ಟಿ ಭತ್ಯೆಯನ್ನು ಪಾವತಿ ಮಾಡಲಾಗಿರುತ್ತದೆ. ಇದನ್ನು ಸರಿಪಡಿಸಲು, 2016ರ ವೇತನ ಬಾಕಿಯನ್ನು ಪಾವತಿಸುವಲ್ಲಿ ಸೂಕ್ತ ಲೆಕ್ಕಾಚಾರ ಹೊಂದಾಣಿಕೆಯನ್ನು ಮಾಡಿಕೊಳ್ಳುವಂತೆ ಈ ಮೊದಲು ತಿಳಿಸಲಾಗಿರುತ್ತದೆ. ಆರ್ಥಿಕ ಇಲಾಖೆಯ ಈ ಅಭಿಪ್ರಾಯವು ಭಾರತ ಸರ್ಕಾರದ ದಿನಾಂಕ:31.12.2008ರ ಪತ್ರ ಸಂ: 1-32//2006-U.II/U.I(i)ರ ಕಂಡಿಕೆ 9ರಲ್ಲಿನ ಅಭಿಪ್ರಾಯಕ್ಕೆ ಪೂರಕವಾಗಿರುತ್ತದೆ. ಏಕೆಂದರೆ, ಪೂರ್ವ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಒಂದು ಉದ್ದೇಶಕ್ಕಾಗಿ ಒಮ್ಮೆ ಮಂಜೂರು ಮಾಡಲಾದ ಭತ್ಯೆಗಳನ್ನು ಪುನಃ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಲೆಕ್ಕ ಹಾಕಿ ಪಾವತಿಸುವುದು, ಒಂದೇ ಭತ್ಯೆಯನ್ನು ಎರಡು ಬಾರಿ ಪಾವತಿಸಿದಂತೆ ಆಗುತ್ತದೆ. ಆದುದರಿಂದ, ಆರ್ಥಿಕ ಇಲಾಖೆಯ ಈ ಹಿಂದಿನ ಅಭಿಪ್ರಾಯವು ನಿಯಮಾನುಸಾರ ಇರುತ್ತದೆ.

ಆದಾಗ್ಯೂ, ಈ ಬಗ್ಗೆ ಆಡಳಿತ ಇಲಾಖೆಯು ಸ್ಪಷ್ಟೀಕರಣ ಕೋರಿ ಪದೇ ಪದೇ ಪ್ರಸ್ತಾವನೆ ಸಲ್ಲಿಸುತ್ತಿರುವುದನ್ನು ಗಮನಿಸಿ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ:

ದಿನಾಂಕ:16.03.2019ರ ಆದೇಶದನ್ವಯ 2016ರ ವೇತನ ಶ್ರೇಣಿಯು ದಿನಾಂಕ:01.01.2016ರಿಂದ ಜಾರಿಗೆ ಬಂದಿರುತ್ತದೆ. ಸದರಿ ಆದೇಶದ ಕಂಡಿಕೆ (5) ಮತ್ತು ಕಂಡಿಕೆ (6)ರಲ್ಲಿ ವಿಶದಪಡಿಸಿರುವಂತೆ, ವೇತನ ಪರಿಷ್ಕರಣೆಯು ದಿನಾಂಕ:01.01.2016ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದರೂ ಸಹ ಪರಿಷ್ಕೃತ ವೇತನ ಶ್ರೇಣಿಯಲ್ಲಿ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ಇತರೆ ಭತ್ಯೆಗಳ ಪರಿಷ್ಕರಣೆಯ ಆರ್ಥಿಕ ಲಾಭವು ಭವಿಷ್ಯಾವರ್ತಿಯಾಗಿ ಪ್ರಾಪ್ತವಾಗತಕ್ಕದ್ದು. ಸರ್ಕಾರದ ಈ ನೀತಿ ನಿರ್ಣಯದ ಉದ್ದೇಶ ಮತ್ತು ಕಾರಣಗಳನ್ನು ಆದೇಶದ ಪ್ರಸ್ತಾವನೆಯಲ್ಲಿ ವಿಸ್ತೃತವಾಗಿ ವಿವರಿಸಲಾಗಿರುತ್ತದೆ. ಆದಕಾರಣ, 2016ರ ಪರಿಷ್ಕೃತ ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸಿ ಆದೇಶ ಹೊರಡಿಸಿದ ನಿಕಟ ಪೂರ್ವದ ಅವಧಿಯಲ್ಲಿ ಪೂರ್ವ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪಾವತಿಸಲಾಗಿರುವ ವೇತನ ಸಂಬಂಧಿತ ಭತ್ಯೆಗಳನ್ನು ಪುನಃ 2016ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಲೆಕ್ಕಹಾಕಿ ಪಾವತಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದುದರಿಂದ, 2016ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನ ಬಾಕಿಯನ್ನು ದಿನಾಂಕ:01.01.2016ರಿಂದ ಲೆಕ್ಕಹಾಕುವಲ್ಲಿ, ಮನೆ ಬಾಡಿಗೆ ಭತ್ಯೆಯನ್ನು ಹೊರತುಪಡಿಸಿ **[(2016 ರ ಪರಿಷ್ಕೃತ ವೇತನ ಶ್ರೇಣಿಯ ಮೂಲ ವೇತನ+ತುಟ್ಟಿ ಭತ್ಯೆ) - (2006 ರ ಪರಿಷ್ಕೃತ ವೇತನ ಶ್ರೇಣಿಯ ಮೂಲ ವೇತನ + ತುಟ್ಟಿ ಭತ್ಯೆ)]** ಇದರ ವ್ಯತ್ಯಾಸದ ಮೊತ್ತವೇ ವೇತನ ಬಾಕಿ ಎಂದು ಪರಿಗಣಿಸತಕ್ಕದ್ದು. ಹೀಗೆ ವೇತನ ಬಾಕಿಯನ್ನು ಲೆಕ್ಕಹಾಕುವಲ್ಲಿ ಸರ್ಕಾರವು ದಿನಾಂಕ:01.01.2016ರ ನಂತರ ದಿನಾಂಕ:31.03.2019ರ ಅವಧಿಯಲ್ಲಿ ಕಾಲ ಕಾಲಕ್ಕೆ ಮಂಜೂರು ಮಾಡಿರುವ ತುಟ್ಟಿ ಭತ್ಯೆಯ ಹೆಚ್ಚಳವನ್ನು ಪರಿಗಣಿಸಿ ಲೆಕ್ಕಹಾಕತಕ್ಕದ್ದು. ಪರಂತು, ಆಡಳಿತ ಇಲಾಖೆಯು ತಿಳಿಸಿರುವಂತೆ ಶೇ 125ರ ತುಟ್ಟಿ ಭತ್ಯೆಯನ್ನು ಸೀಮಿತಗೊಳಿಸಿ (constant) ಲೆಕ್ಕಹಾಕತಕ್ಕದ್ದಲ್ಲ.

ಸಾಂಪ್ರದಾಯಿಕವಾಗಿ ಸ್ಥಾಪಿತ ನ್ಯಾಯಿಕ ತತ್ವದಂತೆ, ಯಾವುದೇ ನಿಯಮ/ಆದೇಶಗಳನ್ನು ಅರ್ಥೈಸುವಲ್ಲಿ ಅಥವಾ ಅದನ್ನು ಅನುಷ್ಠಾನಗೊಳಿಸುವಲ್ಲಿ ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ, ನಿಯಮವನ್ನು ಒಟ್ಟಾರೆ ಸಮಷ್ಟಿಯಾಗಿ ಓದಿಕೊಂಡು ಅದರ ಅರ್ಥ ಮತ್ತು ಉದ್ದೇಶಗಳ ಬೆಳಕಿನಲ್ಲಿ ಅರ್ಥೈಸಿಕೊಳ್ಳತಕ್ಕದ್ದಾಗಿರುತ್ತದೆಯೇ ವಿನಃ, ನಿಯಮದ ಕೆಲವು ಸಾಲು, ಪದ ಅಥವಾ ಕಂಡಿಕೆಗಳನ್ನು ಮಾತ್ರ ಅನ್ವಯಿಸಿ ನಿರ್ವಚಿಸುವುದು ಸ್ವಾಭಾವಿಕ ನ್ಯಾಯಿಕ ತತ್ವದ ಮೂಲ ಸಿದ್ಧಾಂತಕ್ಕೆ ವಿರುದ್ಧವಾದ ಪ್ರಕ್ರಿಯೆಯಾಗುತ್ತದೆ. ಆದುದರಿಂದ, 2016ರ ಪರಿಷ್ಕೃತ ಯು.ಜಿ.ಸಿ. ವೇತನ ಶ್ರೇಣಿಯಲ್ಲಿ ವೇತನ ಬಾಕಿ ಪಾವತಿಸುವಲ್ಲಿ, ದಿನಾಂಕ:16.03.2019ರ ಆದೇಶದ ಕಂಡಿಕೆ (12) ಕೆಲವು ಸಾಲುಗಳನ್ನು ಮಾತ್ರ ಓದಿಕೊಂಡು ಅದರನ್ವಯ ವೇತನ ಬಾಕಿಯ ಬೇಡಿಕೆ ಮಂಡಿಸಿರುವ ಕಾಲೇಜು ಅಧ್ಯಾಪಕರ ಸಂಘದ ಕೋರಿಕೆಯು ಸರ್ವಥಾ ಸ್ವೀಕೃತಾರ್ಹವಾದುದಲ್ಲ ಮತ್ತು ಈ ಕುರಿತ ಆಡಳಿತ ಇಲಾಖೆಯ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಒಪ್ಪುವುದಿಲ್ಲ.

ಈ ಮೇಲಿನ ಕ್ರಮವನ್ನೇ 2006ರ ಯು.ಜಿ.ಸಿ ವೇತನ ಶ್ರೇಣಿಯ ವೇತನ ಬಾಕಿ ಲೆಕ್ಕಾಚಾರಕ್ಕೂ ಅನ್ವಯಿಸುವುದು ಮತ್ತು ವೇತನ ಬಾಕಿ ಪಾವತಿಸುವಲ್ಲಿ, 2006ರ ವೇತನ ಶ್ರೇಣಿಯಲ್ಲಿ ಪಾವತಿಸಲಾಗಿರುವ ಹೆಚ್ಚುವರಿ ಮೊಬಲಗನ್ನು ಹಿಂಪಡೆಯಲು ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು.

ವೇತನ ಬಾಕಿ ಪಾವತಿ ಸಂಬಂಧ ಈ ಮೇಲಿನಂತೆ, ನಿಯಮಾನುಸಾರ ಸೂಕ್ತ ಕ್ರಮವಹಿಸಲು ಹಾಗೂ ಈ ಬಗ್ಗೆ ಪುನಃ ಪ್ರಸ್ತಾವನೆ ಸಲ್ಲಿಸದೇ ವಿಷಯವನ್ನು ತಾರ್ಕಿಕ ಅಂತ್ಯಗೊಳಿಸುವುದು."

ಮೇಲಿನ ಅಭಿಪ್ರಾಯದನ್ವಯ ಅಗತ್ಯ ಕ್ರಮವಹಿಸುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ಇದಕ್ಕೆ ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಆಇ 265 ಸೇ-2 2021 ದಿನಾಂಕ:23.02.2022 ರಲ್ಲಿ ನೀಡಿರುವ ಸಹಮತಿಯನ್ನು ಪಡೆಯಲಾಗಿದೆ

ತಮ್ಮ ನಂಬುಗೆಯ,

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

**<u>ಪ್ರತಿ ಮಾಹಿತಿಗಾಗಿ:</u>**

1 ಮಹಾಲೇಖಪಾಲರು (A & E), ಕರ್ನಾಟಕ, ಬೆಂಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4 ಪ್ರಾದೇಶಿಕ ಆಯುಕ್ತರುಗಳು – ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಮುಖಾಂತರ.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-2), ವಿಧಾನ ಸೌಧ, ಬೆಂಗಳೂರು
6. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9 ಸರ್ಕಾರದ ಜಂಟಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, (ವಿಶ್ವವಿದ್ಯಾಲಯಗಳು & ಸಮನ್ವಯ) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
10 ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ತಾಂತ್ರಿಕ ಶಿಕ್ಷಣ ಮತ್ತು ಯೋಜನಾ ಶಾಖೆ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11 ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಕಾಲೇಜು ಶಿಕ್ಷಣ ಶಾಖೆ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟ, ಬೆಂಗಳೂರು.
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಇಡಿ 306 ಯುಎನ್ಇ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:05.03.2022.

**ಇವರಿಂದ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು-560 001.

**ಇವರಿಗೆ,**
1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳು.

**ಮಾನ್ಯರೇ,**

**ವಿಷಯ:** 7 ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಬಾಕಿಯನ್ನು ಡ್ರಾ ಮಾಡುವ ಮತ್ತು 6 ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ವಸೂಲು ಮಾಡುವ ಕುರಿತು.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಇಡಿ 483 ಯುಎನ್ಇ 2017, ದಿನಾಂಕ: 03.05.2019.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 311 ಯುಎನ್ಇ 2012 (ಭಾಗ 2), ದಿನಾಂಕ: 17.12.2019, 03.01.2020 ಮತ್ತು 24.06.2020.
3. ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 483 ಯುಎನ್ಇ 2017, ದಿನಾಂಕ: 11.08.2020
4. ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 19 ಯುಎನ್ಇ 2021, ದಿನಾಂಕ: 21.10.2021.
5. ಕರ್ನಾಟಕ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ (ರಿ) ರವರ ಮನವಿ ದಿನಾಂಕ: 19.08.2020.
6. ಸರ್ಕಾರದ ಸಮಸಂಖ್ಯೆಯ ಪತ್ರ ದಿನಾಂಕ:25.02.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (6)ರ ದಿನಾಂಕ: 25.02.2022ರಲ್ಲಿ ಹೊರಡಿಸಿರುವ ಪತ್ರವನ್ನು ಈ ಕೂಡಲೇ ತಡೆಹಿಡಿಯಲಾಗಿದೆ. ಈ ಕುರಿತು ಮುಂದಿನ ಕ್ರಮದ ಬಗ್ಗೆ ನಿರ್ದೇಶನ ನೀಡಲಾಗುವುದೆಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

**(ಶೀತಲ್ ಎಂ. ಹಿರೇಮಠ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

**ಪ್ರತಿ ಮಾಹಿತಿಗಾಗಿ:**
1. ಮಹಾಲೇಖಪಾಲರು (A & E), ಕರ್ನಾಟಕ, ಬೆಂಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಪ್ರಾದೇಶಿಕ ಆಯುಕ್ತರುಗಳು - ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಮುಖಾಂತರ.

5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-2), ವಿಧಾನ ಸೌಧ, ಬೆಂಗಳೂರು.
6. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಜಂಟಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, (ವಿಶ್ವವಿದ್ಯಾಲಯಗಳು & ಸಮನ್ವಯ) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ತಾಂತ್ರಿಕ ಶಿಕ್ಷಣ ಮತ್ತು ಯೋಜನಾ ಶಾಖೆ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಕಾಲೇಜು ಶಿಕ್ಷಣ ಶಾಖೆ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟ, ಬೆಂಗಳೂರು.
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 306 ಯುಎನ್ಇ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 09.03.2022

**ಇವರಿಂದ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು-560 001

**ಇವರಿಗೆ,**
1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳು

**ಮಾನ್ಯರೇ,**

**ವಿಷಯ:** 7 ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಬಾಕಿಯನ್ನು ಪಾ. ಮಾಡುವ ಮತ್ತು 6 ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ವಸೂಲು ಮಾಡುವ ಕುರಿತು

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಇಡಿ 483 ಯುಎನ್ಇ 2017 ದಿನಾಂಕ: 03.05.2019.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 311 ಯುಎನ್ಇ 2012 (ಭಾಗ 2), ದಿನಾಂಕ: 17.12.2019, 03.01.2020 ಮತ್ತು 24.06.2020.
3. ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 483 ಯುಎನ್ಇ 2017, ದಿನಾಂಕ: 11.08.2020.
4. ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 19 ಯುಎನ್ಇ 2021, ದಿನಾಂಕ: 21.10.2021
5. ಕರ್ನಾಟಕ ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ (ರಿ) ರವರ ಮನವಿ ದಿನಾಂಕ 19.08.2020.
6. ಸರ್ಕಾರದ ಸಮ ಸಂಖ್ಯೆ ಪತ್ರ ದಿನಾಂಕ 24.02.2022 ಮತ್ತು ಪರಿಷ್ಕೃತ ಪತ್ರ ದಿನಾಂಕ: 25.02.2022.
7. ಸರ್ಕಾರದ ಸಮ ಸಂಖ್ಯೆ ಪತ್ರ ದಿನಾಂಕ: 05.03.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರ (06) ರ ದಿನಾಂಕ: 25.02.2022 ಪತ್ರದಲ್ಲಿ 7 ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಬಾಕಿಯನ್ನು ಪಾ. ಮಾಡುವ ಮತ್ತು 6 ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ವಸೂಲು ಮಾಡುವ ಕುರಿತು ಸ್ಪಷ್ಟೀಕರಣ ನೀಡಲಾಗಿರುತ್ತದೆ. ಆದರೆ ಕೆಲವು ತಾಂತ್ರಿಕ ದೋಷದಿಂದಾಗಿ ದಿನಾಂಕ:25.02.2022 ರ ಪತ್ರವನ್ನು ತಡೆಹಿಡಿಯುವಂತೆ ಉಲ್ಲೇಖಿತ ಪತ್ರ (07) ರ ದಿನಾಂಕ: 05.03.2022 ಪತ್ರದಲ್ಲಿ ತಿಳಿಸಲಾಗಿದೆ.

..2

ಇದರಂತೆ ಸರ್ಕಾರದ ದಿನಾಂಕ:25.02.2022 ರ ಪತ್ರದಲ್ಲಿನ ಪುಟ ಸಂಖ್ಯೆ 3 ರ ಎರಡನೇ ಪ್ಯಾರಾದಲ್ಲಿ ತಿಳಿಸಿರುವ ವೇತನ ಹಿಂಬಾಕಿ ಲೆಕ್ಕಾಚಾರಕ್ಕೆ ಸಂಬಂಧಿಸಿದಂತೆ ನಮೂದಿಸಿರುವ ಸೂತ್ರವು ತಪ್ಪಿನಿಂದ ಮುದ್ರಿತವಾಗಿರುವುದರಿಂದ ಈ ಸೂತ್ರವನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿಕೊಳ್ಳಲು ತಿಳಿಸಿದೆ.

**"ವೇತನ ಬಾಕಿ = (2016ರ ಪರಿಷ್ಕೃತ ವೇತನ ಶ್ರೇಣಿಯ ಮೂಲ ವೇತನ) - (2006ರ ಪರಿಷ್ಕೃತ ವೇತನ ಶ್ರೇಣಿಯ ಮೂಲ ವೇತನ+ತುಟ್ಟಿಭತ್ಯೆ)"**

ಈ ಸೂತ್ರದಂತೆ [illegible] 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ [illegible] 2006ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ [illegible] ಮುಂದುವರೆದು, ವೇತನ ಪರಿಷ್ಕರಣೆ ಮತ್ತು [illegible] ವೇತನ ಬಾಕಿ ಪಾವತಿಸುವಲ್ಲಿ [illegible] ದಿನಾಂಕ:25.02.2022 ರ ಪತ್ರದಲ್ಲಿ [illegible] ವಿವರವಾಗಿ [illegible]

1. ಕಾಲದಿಂದ ಕಾಲಕ್ಕೆ ಹೆಚ್ಚಾಗುವ ಹಣದುಬ್ಬರದ ಅಧಿಕ ಆರ್ಥಿಕ ಹೊರೆಯ ಪರಿಣಾಮವನ್ನು ಸರಿದೂಗಿಸಲು, ನಿರ್ದಿಷ್ಟ ದರ, ಸೂಚ್ಯಂಕ ದರದ ಆಧಾರದ ಮೇಲೆ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆಯನ್ನು ಕಾಲದಿಂದ ಕಾಲಕ್ಕೆ ಮಂಜೂರು ಮಾಡಲಾಗುತ್ತದೆ. ಇದು ತುಟ್ಟಿಭತ್ಯೆ ಮಂಜೂರು ಮಾಡುವ ಪ್ರಮುಖ ತತ್ವವಾಗಿರುತ್ತದೆ.
2. ಸರ್ವೇ ಸಾಮಾನ್ಯವಾಗಿ ವೇತನ ಪರಿಷ್ಕರಣೆ ಮಾಡುವಾಗ, ವೇತನ ಪರಿಷ್ಕರಣೆಯ ದಿನಾಂಕದಂದು ಲಭ್ಯವಿದ್ದ ತುಟ್ಟಿಭತ್ಯೆಯನ್ನು ಮೂಲ ವೇತನದೊಂದಿಗೆ ವಿಲೀನಗೊಳಿಸಿ, ವೇತನ ಪರಿಷ್ಕರಣೆಯನ್ನು ಮಾಡಲಾಗುತ್ತದೆ.
3. ಸಾಮಾನ್ಯವಾಗಿ ವೇತನ ಪರಿಷ್ಕರಣೆಯ ನಂತರ ಯಾವುದೇ ಹಿಂಬಾಕಿ ವೇತನದ ಮೊತ್ತವನ್ನು ಪಾವತಿಸುವಲ್ಲಿ ವೇತನ ಸಂಬಂಧಿತ ಭತ್ಯೆಗಳನ್ನು ಸ್ವಯಂಚಾಲಿತವಾಗಿ ಪಾವತಿಸಲಾಗುತ್ತದೆ. ಏಕೆಂದರೆ, ವೇತನ ಪರಿಷ್ಕರಣೆಯ ಅವಧಿಯಲ್ಲಿ ನೌಕರರಿಗೆ ಪೂರ್ವ ಪರಿಷ್ಕೃತ ವೇತನ ಶ್ರೇಣಿಯಲ್ಲಿ ತುಟ್ಟಿಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆ ಬಾಬುಗಳನ್ನು ಮಂಜೂರು ಮಾಡಲಾಗಿರುತ್ತದೆ. ಆದ್ದರಿಂದ, ಪುನಃ ಈ ಭತ್ಯೆಗಳನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ಪುನಃ ಮಂಜೂರು ಮಾಡುವುದು ಸಾಮಾನ್ಯ ಆರ್ಥಿಕ ತತ್ವಗಳಿಗೆ ವಿರುದ್ಧವಾಗಿರುತ್ತದೆ.

ವೇತನ ಪರಿಷ್ಕರಣೆ ಮತ್ತು ವೇತನ ಸಂಬಂಧಿತ ಭತ್ಯೆಗಳಾದ ತುಟ್ಟಿಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಗಳನ್ನು ಮಂಜೂರು ಮಾಡುವ ಕುರಿತಂತೆ ಅನುಸರಿಸಬೇಕಾದ ಈ ಮೇಲಿನ ಪ್ರಮುಖ ತತ್ವಗಳ ಬೆಳಕಿನಲ್ಲಿ ಮತ್ತು ಈ ಬಗ್ಗೆ ಇಲಾಖೆಯು ಈ ಮೊದಲು ನೀಡಿದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ, ಪ್ರಕರಣವನ್ನು ಪರಿಶೀಲಿಸಿ, ತಪ್ಪಾಗಿ ಪಾವತಿಸಿರುವ ಹೆಚ್ಚುವರಿ ಭತ್ಯೆಗಳನ್ನು ಹಿಂಪಡೆಯುವ ಬಗ್ಗೆ ಹಾಗೂ ಪ್ರಸಕ್ತ ವೇತನ ಶ್ರೇಣಿಯಲ್ಲಿ ವೇತನ ಹಿಂಬಾಕಿ ಪಾವತಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ಇದಕ್ಕೆ ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 265 ವೆಚ್ಚ-2/ 2022 ದಿನಾಂಕ 07.03.2022 ರಲ್ಲಿ ನೀಡಿರುವ ಸಹಮತಿಯನ್ನು ಪಡೆಯಲಾಗಿದೆ.

**ತಮ್ಮ ನಂಬುಗೆಯ,**

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

**ಪ್ರತಿ ಮಾಹಿತಿಗಾಗಿ:**

1. ಮಹಾಲೇಖಪಾಲರು (A & E), ಕರ್ನಾಟಕ, ಬೆಂಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು.

3. ಮಹಾಲೇಖಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಪ್ರಾದೇಶಿಕ ಆಯುಕ್ತರುಗಳಿಗೆ - ಕಾಲೇಜು ಶಿಕ್ಷಣ ಇಲಾಖೆಯ ಮುಖಾಂತರ.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-2), ವಿಧಾನ ಸೌಧ, ಬೆಂಗಳೂರು.
6. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
8. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
9. ಸರ್ಕಾರದ ಜಂಟಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, (ವಿಶ್ವವಿದ್ಯಾಲಯಗಳು & ಸಮನ್ವಯ) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಕಾಲೇಜು ಶಿಕ್ಷಣ ಶಾಖೆ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ತಾಂತ್ರಿಕ ಶಿಕ್ಷಣ ಶಾಖೆ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12. ಅಧ್ಯಕ್ಷರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಮತ್ತು ಕಾಲೇಜು ಅಧ್ಯಾಪಕರ ಸಂಘಗಳ ಒಕ್ಕೂಟ, ಬೆಂಗಳೂರು
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# <u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಇಡಿ 306 ಯುಎನ್‌ಇ 2021 (ವಿವಿ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 13.04.2022

**<u>ಇವರಿಂದ</u>,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬೆಂಗಳೂರು-560 001

**<u>ಇವರಿಗೆ</u>,**
1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳು.

**ಮಾನ್ಯರೇ,**

**ವಿಷಯ:** 2016ರ ಪರಿಷ್ಕೃತ ಯುಜಿಸಿ/ಐಸಿಎಆರ್/ಎಐಸಿಟಿಇ ವೇತನ ಶ್ರೇಣಿಗಳಲ್ಲಿನ ಬೋಧಕ ಮತ್ತು ತತ್ಸಮಾನ ವೃಂದದ ಸಿಬ್ಬಂದಿಗಳಿಗೆ ತುಟ್ಟಿಭತ್ಯೆಯ ದರಗಳನ್ನು ಪರಿಷ್ಕರಿಸುವ ಕುರಿತು.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ: ಆಇ 23 ಎಸ್‌ಆರ್‌ಪಿ 2022, ದಿನಾಂಕ: 11.04.2022.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಲ್ಲಿ 2016ರ ಪರಿಷ್ಕೃತ ಯುಜಿಸಿ/ಐಸಿಎಆರ್/ಎಐಸಿಟಿಇ ವೇತನ ಶ್ರೇಣಿಗಳಲ್ಲಿನ ಬೋಧಕ ಮತ್ತು ತತ್ಸಮಾನ ವೃಂದದ ಸಿಬ್ಬಂದಿಗಳಿಗೆ ತುಟ್ಟಿಭತ್ಯೆಯ ದರಗಳನ್ನು ಪ್ರಸ್ತುತ ಮೂಲ ವೇತನದ ಶೇಕಡ 31 ರಿಂದ 34ಕ್ಕೆ 1ನೇ ಜನವರಿ 2022ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ.

ಈ ಆದೇಶದಲ್ಲಿನ ಕ್ರಮಸಂಖ್ಯೆ 02 ರಿಂದ 10ರವರೆಗೆ ತಿಳಿಸಿರುವ ಅಂಶಗಳನ್ವಯ 2016ರ ಪರಿಷ್ಕೃತ ಯುಜಿಸಿ/ಐಸಿಎಆರ್/ಎಐಸಿಟಿಇ ವೇತನ ಶ್ರೇಣಿಗಳಲ್ಲಿನ ಬೋಧಕ ಮತ್ತು ತತ್ಸಮಾನ ವೃಂದದ ಸಿಬ್ಬಂದಿಗಳಿಗೆ ತುಟ್ಟಿಭತ್ಯೆ ದರಗಳನ್ನು ಪರಿಷ್ಕರಿಸಿ ನೀಡಲು ಅಗತ್ಯ ಕ್ರಮವಹಿಸುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಶೀತಲ್ ಎಂ. ಹಿರೇಮಠ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1)

**<u>ಪ್ರತಿ ಮಾಹಿತಿಗಾಗಿ</u>:**

1. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು-2), ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿಗಳ ಆಪ್ತ ಸಹಾಯಕರು, (ವಿಶ್ವವಿದ್ಯಾಲಯಗಳು & ಸಮನ್ವಯ) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಕಾಲೇಜು ಶಿಕ್ಷಣ ಶಾಖೆ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ತಾಂತ್ರಿಕ ಶಿಕ್ಷಣ ಶಾಖೆ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

# ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 58 ಹೆಚ್‌ಪಿಸಿ 2022.

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 27.04.2022.

ಇಂದ,

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಇವರಿಗೆ,

1. ಆಯುಕ್ತರು,ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,ಶೇಷಾದ್ರಿ ರಸ್ತೆ, ಬೆಂಗಳೂರು-560 001.
2. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯದ ಕುಲಪತಿಗಳು/ಕುಲಸಚಿವರು/ಹಣಕಾಸು ಅಧಿಕಾರಿಗಳು.

ಮಾನ್ಯರೇ,

ವಿಷಯ:- ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜು/ಬಿ.ಎಡ್.ಕಾಲೇಜು/ಇಂಜಿನಿಯರಿಂಗ್ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಬೋಧಕ ಹಾಗೂ ತತ್ಸಮಾನ ಸಿಬ್ಬಂದಿಗೆ 2006 ಮತ್ತು 2016ರ ಪರಿಷ್ಕೃತ ಯುಜಿಸಿ/ಎಐಸಿಟಿಇ ವ್ಯತ್ಯಾಸದ ಮೊತ್ತ ಪಾವತಿಸುವ ಕುರಿತು:

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ಇಡಿ 58 ಹೆಚ್‌ಪಿಸಿ 2022, ದಿನಾಂಕ: 30/03/2022
2) ಸರ್ಕಾರದ ಪತ್ರ ಸಂಖ್ಯೆ: ಇಡಿ 306 ಯುಎನ್ಇ 2021, ದಿನಾಂಕ: 25/02/2022, 5/3/2022, 9/3/2022 ಮತ್ತು ಸರ್ಕಾರದ ಪತ್ರ ಸಂಖ್ಯೆ: ಇಡಿ 306 ಯುಎನ್ಇ 2021 (ಭಾ-1) ದಿನಾಂಕ 13/4/2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜು/ಬಿ.ಎಡ್.ಕಾಲೇಜು/ಇಂಜಿನಿಯರಿಂಗ್ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಬೋಧಕ ಹಾಗೂ ತತ್ಸಮಾನ ಸಿಬ್ಬಂದಿಗೆ 2006 ಮತ್ತು 2016ರ ಪರಿಷ್ಕೃತ ಯುಜಿಸಿ/ಎಐಸಿಟಿಇ ವ್ಯತ್ಯಾಸದ ಮೊತ್ತ ಪಾವತಿಸಲು ರೂ.45469.22ಲಕ್ಷಗಳನ್ನು ಬಿಡುಗಡೆಗೊಳಿಸಿ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಪಿ.ಡಿ.

ಖಾತೆಯಲ್ಲಿಟ್ಟುಕೊಂಡು ಆರು ತಿಂಗಳೊಳಗೆ ಬಾಕಿಗಳನ್ನು ಪೂರ್ಣಗೊಳಿಸಲು ಉಲ್ಲೇಖಿತ (1)ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಮುಂದುವರೆದು, ಉಲ್ಲೇಖಿತ (2)ರ ಪತ್ರಗಳಲ್ಲಿ ಯುಜಿಸಿ ಹಿಂಬಾಕಿ ಮೊತ್ತವನ್ನು ಲೆಕ್ಕಾಚಾರ ಮಾಡಬೇಕಾದ ಕ್ರಮಗಳನ್ನು ತಿಳಿಸಲಾಗಿದೆ. ಸದರಿ ಪತ್ರಗಳಂತೆ ಹಿಂಬಾಕಿ ಮೊತ್ತವನ್ನು ಲೆಕ್ಕಚಾರ ಮಾಡತಕ್ಕದ್ದು ಹಾಗೂ ತಪ್ಪಾಗಿ ಪಾವತಿಸಿರುವ ಹೆಚ್ಚುವರಿ ಭತ್ಯೆಗಳನ್ನು ಹಿಂಪಡೆಯುವ ಬಗ್ಗೆ ಕ್ರಮವಹಿಸುವುದು. ಹಿಂಬಾಕಿ ಮೊತ್ತವನ್ನು ಲೆಕ್ಕಾಚಾರ ಮಾಡುವಲ್ಲಿ ಲೋಪದೋಷಗಳಾದಲ್ಲಿ ಸಂಬಂಧಪಟ್ಟ ಲೆಕ್ಕಾಧಿಕಾರಿಗಳನ್ನೇ ಹೊಣೆ ಮಾಡಲಾಗುವುದು.

ಆದ್ದರಿಂದ ಉಲ್ಲೇಖಿತ (2)ರ ಪತ್ರಗಳಲ್ಲಿ ತಿಳಿಸಿರುವಂತೆ, ನಿಯಮಾನುಸಾರ ಯುಜಿಸಿ ಹಿಂಬಾಕಿ ಮೊತ್ತವನ್ನು ಲೆಕ್ಕಾಚಾರ ಮಾಡುವಾಗ ಅರ್ಹ ಬೋಧಕ ಸಿಬ್ಬಂದಿಯ ಹೆಸರು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ ಮತ್ತು ವೇತನ, ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಯುಜಿಸಿ/ಎಐಸಿಟಿಇ ವ್ಯತ್ಯಾಸದ ಮೊತ್ತ ಪಾವತಿಸಬೇಕೆಂಬ ವಿವರಗಳು, ಜೊತೆಗೆ ಹೀಗಾಗಲೇ ಹೆಚ್ಚುವರಿ ವ್ಯತ್ಯಾಸ ಮೊತ್ತ ಪಾವತಿಸಿದ್ದಲ್ಲಿ, ವಸೂಲು ಮಾಡಿರುವ ಬಗ್ಗೆ ವಿವರಗಳು, ಈ ಹಿಂದೆ ಇದೇ ಉದ್ದೇಶಕ್ಕಾಗಿ ಬಿಡುಗಡೆ ಮಾಡಿರುವ ಮೊತ್ತ, ಬಳಕೆಯಾಗಿರುವ ಮೊತ್ತ, ಉಳಿಕೆಯಾಗಿರುವ ಮೊತ್ತ, ಉಳಿಕೆ ಮೊತ್ತವನ್ನು ಸರ್ಕಾರಕ್ಕೆ ಮರುಪಾವತಿ ಮಾಡಿರುವ ಬಗ್ಗೆ ಈ ಎಲ್ಲಾ ಮಾಹಿತಿಯನ್ನು ಒಳಗೊಂಡಿರುವ ಕ್ರೋಢೀಕರಿಸಿದ ಪ್ರಸ್ತಾವನೆಯನ್ನು 15 ದಿವಸಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ. ಒಂದು ವೇಳೆ ಸದರಿ ವಿಷಯದ ಬಗ್ಗೆ ತಮ್ಮಿಂದ ಯಾವುದೇ ಮಾಹಿತಿಯು ನಿಗದಿತ ಕಾಲಾವಧಿಯಲ್ಲಿ ಸರ್ಕಾರದಲ್ಲಿ ಸ್ವೀಕೃತವಾಗದಿದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸಹ ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

27/04/2022

(ಎಂ.ಜಿ. ವೆಂಕಟೇಶಯ್ಯ)

ಸರ್ಕಾರದ ಉಪ ಕಾರ್ಯದರ್ಶಿ,

(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)

ಉನ್ನತ ಶಿಕ್ಷಣ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಇಡಿ 19 ಹೆಚ್‌ಪಿಟಿ 2022.

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 07.05.2022.

ಇಂದ,

ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ರವರಿಗೆ,

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಕುಲಸಚಿವರು/ಹಣಕಾಸು ಅಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ಮಾನ್ಯರೇ,

ವಿಷಯ:- ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ವೇತನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:-
1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಪತ್ರ ಸಂಖ್ಯೆ: DTE 49 ಡಿವಿಪಿ (1) 2018, ದಿನಾಂಕ: 09.09.2021.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 58 ಹೆಚ್‌ಪಿಸಿ 2022, ದಿನಾಂಕ: 30.03.2022.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 306 ಯುಎನ್‌ಇ 2021, ದಿನಾಂಕ: 25.02.2022, 05.03.2022, 09.03.2022 ಮತ್ತು ಸರ್ಕಾರದ ಪತ್ರ ಸಂಖ್ಯೆ: ಇಡಿ 306 ಯುಎನ್‌ಇ 2021 (ಭಾಗ-1), ದಿನಾಂಕ: 13.04.2022.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ಪತ್ರದಲ್ಲಿ 01.01.2016 ರಿಂದ 31.03.2020ರವರೆಗಿನ 7ನೇ ವೇತನ ಶ್ರೇಣಿಯ ಬಾಕಿಯನ್ನು ಪಾವತಿಸಲು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಲೆಕ್ಕ ಶೀರ್ಷಿಕೆ: 2203-00-112-0-02ರಡಿ ರೂ.3589.47ಲಕ್ಷಗಳು ಹಾಗೂ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ಲೆಕ್ಕ ಶೀರ್ಷಿಕೆ: 2203-00-112-0-0-07ರಡಿ ರೂ.11204.86ಲಕ್ಷಗಳು ಒಟ್ಟು ರೂ.14794.33ಲಕ್ಷಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡುವಂತೆ ಕೋರಿರುವ ಬಗ್ಗೆ ಪರಿಶೀಲಿಸಿದೆ.

ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಗೊಳಪಡುವ ಸರ್ಕಾರಿ/ಅನುದಾನಿತ ಪ್ರಥಮ ದರ್ಜೆ ಕಾಲೇಜು/ಬಿ.ಎಡ್.ಕಾಲೇಜು/ಇಂಜಿನಿಯರಿಂಗ್ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಬೋಧಕ ಹಾಗೂ ತತ್ಸಮಾನ ಸಿಬ್ಬಂದಿಗೆ 2006 ಮತ್ತು 2016ರ ಪರಿಷ್ಕೃತ ಯು.ಜಿ.ಸಿ/ಎಐಸಿಟಿಇ ವೇತನ ಶ್ರೇಣಿಯ ವ್ಯತ್ಯಾಸದ ಬಾಕಿ ಮೊತ್ತವನ್ನು ಪಾವತಿಸಲು ಲೆಕ್ಕ ಶೀರ್ಷಿಕೆ: 2202-01-800-1-91-014ರಡಿ ರೂ.45469.22ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸಿ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪಿ.ಡಿ

ಖಾತೆಯಲ್ಲಿಟ್ಟುಕೊಂಡು ಆರು ತಿಂಗಳೊಳಗೆ ಬಾಕಿಗಳನ್ನು ಪೂರ್ಣಗೊಳಿಸಲು ಉಲ್ಲೇಖಿತ (2)ರ ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಮುಂದುವರೆದು, ಉಲ್ಲೇಖಿತ (3)ರ ಪತ್ರಗಳಲ್ಲಿ ಯುಜಿಸಿ ಹಿಂಬಾಕಿ ಮೊತ್ತವನ್ನು ಲೆಕ್ಕಾಚಾರ ಮಾಡಬೇಕಾದ ಕ್ರಮಗಳನ್ನು ತಿಳಿಸಲಾಗಿದೆ. ಸದರಿ ಪತ್ರಗಳಂತೆ ಹಿಂಬಾಕಿ ಮೊತ್ತವನ್ನು ಲೆಕ್ಕಾಚಾರ ಮಾಡತಕ್ಕದ್ದು ಹಾಗೂ ತಪ್ಪಾಗಿ ಪಾವತಿಸಿರುವ ಹೆಚ್ಚುವರಿ ಭತ್ಯೆಗಳನ್ನು ಹಿಂಪಡೆಯುವ ಬಗ್ಗೆ ಕ್ರಮವಹಿಸುವುದು. ಹಿಂಬಾಕಿ ಮೊತ್ತವನ್ನು ಲೆಕ್ಕಾಚಾರ ಮಾಡುವಲ್ಲಿ ಲೋಪದೋಷಗಳಾದಲ್ಲಿ ಸಂಬಂಧಪಟ್ಟ ಲೆಕ್ಕಾಧಿಕಾರಿಗಳನ್ನೇ ಹೊಣೆ ಮಾಡಲಾಗುವುದು.

ಆದ್ದರಿಂದ, ಉಲ್ಲೇಖಿ (3)ರ ಪತ್ರಗಳಲ್ಲಿ ತಿಳಿಸಿರುವಂತೆ ನಿಯಮಾನುಸಾರ ಎಐಸಿಟಿಇ ಹಿಂಬಾಕಿ ಮೊತ್ತವನ್ನು ಲೆಕ್ಕಾಚಾರ ಮಾಡುವಾಗ ಅರ್ಹ ಬೋಧಕ ಸಿಬ್ಬಂದಿಯ ಹೆಸರು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ ಮತ್ತು ವೇತನ, ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಯುಜಿಸಿ/ಎಐಸಿಟಿಇ ವ್ಯತ್ಯಾಸದ ಮೊತ್ತ ಪಾವತಿಸಬೇಕೆಂಬ ವಿವರಗಳು, ಜೊತೆಗೆ ಈಗಾಗಲೇ ಹೆಚ್ಚುವರಿ ವ್ಯತ್ಯಾಸ ಮೊತ್ತ ಪಾವತಿಸಿದ್ದಲ್ಲಿ, ವಸೂಲು ಮಾಡಿರುವ ಬಗ್ಗೆ ವಿವರಗಳು, ಈ ಹಿಂದೆ ಇದೇ ಉದ್ದೇಶಕ್ಕಾಗಿ ಬಿಡುಗಡೆ ಮಾಡಿರುವ ಮೊತ್ತ, ಬಳಕೆಯಾಗಿರುವ ಮೊತ್ತ, ಉಳಿಕೆಯಾಗಿರುವ ಮೊತ್ತ, ಉಳಿಕೆ ಮೊತ್ತವನ್ನು ಸರ್ಕಾರಕ್ಕೆ ಮರುಪಾವತಿ ಮಾಡಿರುವ ಬಗ್ಗೆ ಈ ಎಲ್ಲಾ ಮಾಹಿತಿಯನ್ನು ಒಳಗೊಂಡಿರುವ ಕ್ರೋಢೀಕರಿಸಿದ ಪ್ರಸ್ತಾವನೆಯನ್ನು 15 ದಿವಸಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ಒಂದು ವೇಳೆ ಸದರಿ ವಿಷಯದ ಬಗ್ಗೆ ತಮ್ಮಿಂದ ಯಾವುದೇ ಮಾಹಿತಿಯು ನಿಗಧಿತ ಕಾಲಾವಧಿಯಲ್ಲಿ ಸರ್ಕಾರದಲ್ಲಿ ಸ್ವೀಕೃತವಾಗದಿದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಸಹ ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

07/05/2022

(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.